ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.5240/2023

ಪಿ.ಡಬ್ಲ್ಯೂ -03
ಸಿ.ಡಬ್ಲ್ಯೂ-05

ಸಾಕ್ಷಿದಾರನ ಹೆಸರುಃ- ಕಮಲಾಕರ್ ಬಿ. ಹೆಗ್ಡೆಕರ್
ತಂದೆಯ ಹೆಸರುಃ- ಬಾಳಹೆಗ್ಡಕರ್
ವಯಸ್ಸುಃ- 58ವರ್ಷ
ಉದ್ಯೋಗಃ- ಅಬಕಾರಿ ಉಪನಿರೀಕ್ಷಕರು
ವಾಸಃ- ಕೆ.ಎಸ್. ಬಿ.ಸಿ ರೆಡ್ಡಿ ಸರ್ಕಲ್ 1ಬೆಂಗಳೂರು

**ಸಾಕ್ಷಿಗೆ ದಿಃ 08.04.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ನಾನು 03.09.2015 ರಿಂದ 18.10.2019 ರವರೆಗೆ ಕುಣಿಗಲ್ ವಲಯದಲ್ಲಿ ಅಭಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.06.2019 ರಂದು ವಿದ್ಯಾ.ಎ.ಎಸ್. ಉಪನಿರೀಕ್ಷಕರವರಿಂದ ಪ್ರಕರಣದ ದಾಖಲಾತಿ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ಚಾ.ಸಾ.1ರವರು ಕೃತ್ಯವನ್ನು ಪತ್ತೆ ಹಚ್ಚಿ ಪ್ರಕರಣವನ್ನು ದಾಖಲಿಸಿಕೊಂಡು ವಿದ್ಯಾ.ಎ.ಎಸ್. ಉಪನಿರೀಕ್ಷಕರವರಿಗೆ ಕಡತವನ್ನು ನೀಡಿರುತ್ತಾರೆ. ದಿಃ17.06.2019ರಂದು ಪಂಚರಾದ ಚಾ.ಸಾ.2 ರಿಂದ ಚಾ.ಸಾ.4ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ20.07.2019ರಂದು ಎಫ್.ಎಸ್.ಎಲ್ ವರದಿಯನ್ನು ಪಡೆದಿರುತ್ತೇನೆ. ನಂತರ ತನಿಖೆ ಮುಕ್ತಾಯಗೊಳಿಸಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಎಫ್.ಎಸ್.ಎಲ್ ವರದಿಯನ್ನು ನಿ.ಪಿ.4 ಎಂದು, ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಚಾಸಾ.1ರವರು ಈಗ ಮರಣ ಹೊಂದಿರುತ್ತಾರೆ. ಅವರ ಸಹಿಯನ್ನು ಈಗ ನಾನು ಗುರುತಿಸುತ್ತೇನೆ. ಎಫ್ ಐ ಆರ್ ಗೆ ಅವರ ಸಹಿ ಇರುತ್ತದೆ ಅದನ್ನು ನಿ.ಪಿ.5 ಎಂದು, ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಕರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**